ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು:

1. ಕುದುರೆಮುಖ ಕಬ್ಬಿಣ ಮತ್ತು ಅದಿರು ಕಂಪನಿ ನಿಯಮಿತ (ಬಂಡವಾಳ ಹೂಡಿಕೆ ರೂ.1116.50 ಕೋಟಿ)
2. ವಿಜ್ಞಾನ್ ಇಂಡಸ್ಟ್ರೀಸ್ ಲಿಮಿಟೆಡ್., ತರೀಕೆರೆ (ಬಂಡವಾಳ ಹೂಡಿಕೆ ರೂ.4.62 ಕೋಟಿ)
3. ಮೈಸೂರು ಕಾಫಿ ಕ್ಯೂರಿಂಗ್ ವರ್ಕ್ಸ್, ಚಿಕ್ಕಮಗಳೂರು (ಬಂಡವಾಳ ಹೂಡಿಕೆ ರೂ.3.00 ಕೋಟಿ)

ಸಣ್ಣ ಕೈಗಾರಿಕಾ ಘಟಕಗಳು:

ಕ್ರ.ಸ.	ತಾಲ್ಲೂಕು	ಘಟಕಗಳ ಸಂಖ್ಯೆ:
1.	ಚಿಕ್ಕಮಗಳೂರು	1297
2.	ತರೀಕೆರೆ	1030
3.	ಕಡೂರು	1039
4.	ನರಸಿಂಹರಾಜಪುರ	486
5.	ಮೂಡಿಗೆರೆ	584
6.	ಕೊಪ್ಪ	449
7.	ಶೃಂಗೇರಿ	358
	ಒಟ್ಟು	5243

ಸಣ್ಣ ಕೈಗಾರಿಕೆಗಳಲ್ಲಿನ ಒಟ್ಟು ಬಂಡವಾಳ ಹೂಡಿಕೆ ರೂ.78.78 ಕೋಟಿಗಳು.

1852(2342) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್.(ಚಾಮರಾಜ): ಮಾನ್ಯ ಪಶು ಸಂಗೋಪನೆ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದಲ್ಲಿ ಹೈನುಗಾರಿಕೆಯಿಂದಾಗಿ ಜೀವನ ನಡೆಸುತ್ತಿರುವವರ ವಿವರಗಳೇನು?

ಆ) ಹೈನುಗಾರಿಕೆಗೆ ಸರ್ಕಾರದ ವತಿಯಿಂದ ನೀಡಲಾಗುತ್ತಿರುವ ಸೌಲಭ್ಯಗಳ ವಿವರಗಳೇನು?

ಇ) ಹೈನುಗಾರಿಕೆಗೆ ಇನ್ನೂ ಹೆಚ್ಚಿನ ಪ್ರೋತ್ಸಾಹ ನೀಡಿ, ಹೈನುಗಾರಿಕೆಯನ್ನು ಉದ್ಯಮವಾಗಿ ಪರಿಗಣಿಸುವ ದಿಶೆಯಲ್ಲಿ ಸರ್ಕಾರ ಯಾವ ಯಾವ ಕ್ರಮ ವಹಿಸಲಿದೆ?

ಶ್ರೀ ಮಿರಾಜುದ್ದೀನ್ ಎನ್.ಪಟೇಲ್ (ಪಶು ಸಂಗೋಪನೆ ಮತ್ತು ವಕ್ಫ್ ಸಚಿವರು):

ಅ) ನಗರದಲ್ಲಿ ಒಟ್ಟು ಕುಟುಂಬಗಳ ಸಂಖ್ಯೆ	114792
2003ರ ಜಾನುವಾರು ಗಣತಿಯ ಪ್ರಕಾರ	
ಹೈನುಗಾರಿಕೆಯಲ್ಲಿ ತೊಡಗಿರುವವರ ಸಂಖ್ಯೆ	2861
ಮಿಶ್ರ ತಳಿ ಹಸುಗಳ ಸಂಖ್ಯೆ	7942
ವಿದೇಶಿ ತಳಿ ಹಸುಗಳ ಸಂಖ್ಯೆ	65
ಎಮ್ಮೆಗಳ ಸಂಖ್ಯೆ	88

ಆ) > ಹೈನುಗಾರಿಕೆಗೆ ಆದ್ಯತೆಯ ಮೇರೆಗೆ ಕಡಿಮೆ ಬಡ್ಡಿದರದಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ನೀಡಲಾಗುತ್ತಿದೆ.

> ನಿರುದ್ಯೋಗಿಗಳಿಗೆ ಪ್ರಧಾನ ಮಂತ್ರಿಗಳ ರೋಜ್‌ಗಾರ್ ಯೋಜನೆಯಡಿಯಲ್ಲಿ ಸಹಾಯ ಧನದೊಂದಿಗೆ ಸಾಲ ಸೌಲಭ್ಯ ನೀಡಲಾಗುತ್ತಿದೆ.

> ಹೈನುಗಾರಿಕೆಯಲ್ಲಿ ತೊಡಗುವವರಿಗೆ ಆಧುನಿಕ ತರಬೇತಿಯನ್ನು ಉಚಿತವಾಗಿ ಇಲಾಖಾ ವತಿಯಿಂದ ನೀಡಲಾಗುತ್ತಿದೆ.

> ಆರೋಗ್ಯ ರಕ್ಷಣೆ ಮತ್ತು ಕೃತಕ ಗರ್ಭಧಾರಣೆ ಹಾಗೂ ವಿಸ್ತರಣಾ ಸೇವೆಯನ್ನು ಒದಗಿಸಲಾಗುತ್ತಿದೆ.

> ಜಾನುವಾರು ರೋಗ ನಿರೋಧಕ ಲಸಿಕೆಗಳನ್ನು (ಕಾಲುಬಾಯಿ ಜ್ವರ ಹೊರತು ಪಡಿಸಿ) ಉಚಿತವಾಗಿ ನೀಡಲಾಗುತ್ತಿದೆ.

> ಜಾನುವಾರು ರೋಗ ತಪಾಸಣೆ ಪ್ರಯೋಗಾಲಯಗಳ ಸ್ಥಾಪನೆ.

ಇ) ಇಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.

1854(2344) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್.(ಚಾಮರಾಜ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯಾದಾದ್ಯಂತ ಎಲ್ಲೆಲ್ಲಿ ಮೊರಾರ್ಜಿ ದೇಸಾಯಿ ಮಾದರಿ ವಸತಿ ಶಾಲೆಗಳಿವೆ?

ಆ) ಅವುಗಳನ್ನು ಯಾವಾಗ ಪ್ರಾರಂಭಿಸಲಾಯಿತು?

ಇ) ಸದರಿ ಶಾಲೆಗಳಲ್ಲಿ ಎಷ್ಟೆಷ್ಟು ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದಾರೆ?

ಈ) ಯಾವ ಯಾವ ತರಗತಿಯಿಂದ ಯಾವ ಯಾವ ತರಗತಿಯವರೆಗೆ ಓದುತ್ತಿದ್ದಾರೆ?

ಉ) ಈ ಶಾಲೆಗಳಲ್ಲಿ ಗೌರವಧನ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಪ್ರಾಂಶುಪಾಲರು ಹಾಗೂ ಶಿಕ್ಷಕರ ವೇಚ್ಚವೆಷ್ಟು? (ವಿವರಗಳನ್ನು ಆಯಾಯ ಶಾಲೆವಾರು ತಿಳಿಸುವುದು)

ಊ) ಹೀಗೆ ಗೌರವ ಧನ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವವರನ್ನು 10–04–2005ರ ನಂತರವೂ ಮುಂದುವರೆಸಬೇಕೆಂಬ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ವೈ. ನಾಗಪ್ಪ (ಮಾನ್ಯ ಸಮಾಜ ಕಲ್ಯಾಣ ಸಚಿವರು):

ಅ) ರಾಜ್ಯದಲ್ಲಿ ಒಟ್ಟು 116 ವಸತಿ ಶಾಲೆಗಳಿವೆ? ಅದರಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಸಂಖ್ಯೆ:85 (ವಸತಿ ಶಾಲೆಗಳ ಪಟ್ಟಿಯನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ)

ಆ)

ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ವರ್ಗವಾರು	ವಸತಿ ಶಾಲೆಗಳ ಸಂಖ್ಯೆ	ಪ್ರಾರಂಭಿಸಿದ ವರ್ಷ
ಪರಿಶಿಷ್ಟ ಜಾತಿ ವಸತಿ ಶಾಲೆಗಳು	47	1996 ಮತ್ತು 1999
ಹಿಂದುಳಿದ ವರ್ಗ ವಸತಿ ಶಾಲೆಗಳು	14	1996
ಅಲ್ಪ ಸಂಖ್ಯಾತರ ವಸತಿ ಶಾಲೆಗಳು	04	1999
ಶಿಕ್ಷಣ ಇಲಾಖೆಯ ವಸತಿ ಶಾಲೆಗಳು	20	1995
ಒಟ್ಟು	85	